ಅಭಿವೃದ್ಧಿಶೀಲ ಆಟ. ರನ್‌ಗಳನ್ನು ಉತ್ಪಾದನೆ ಮಾಡಬಲ್ಲ ಎಂಥದ್ದೇ ಸೃಜನಶೀಲ ಹೊಡೆತಕ್ಕೂ ಅಂಕಗಳುಂಟು. ಅದನ್ನು 'ಇಂಪ್ರೂವೈಸೇಷನ್' ಎಂಬ ಶಿಷ್ಟ ಪದವನ್ನು ಸೂಚಿಸಿ ಹೇಳಲಾರಂಭಿಸಿದ್ದೇವೆ.

ಈ ಸಲದ ವಿಶ್ವಕಪ್ ಶುರುವಾದದ್ದನ್ನೇ ಗಮನಿಸಿ. ಪಾಕಿಸ್ತಾನವನ್ನು ತನ್ನ ಶಾರ್ಟ್ ಪಿಚ್ ಹಾಗೂ ಗುಡ್ ಲೆಂಗ್ತ್ ಎಸೆತಗಳ ಮೂಲಕ ವೆಸ್ಟ್ ಇಂಡೀಸ್ ತಂಡವನ್ನು ಚಿಂದಿ ಮಾಡಿತ್ತು. ಆಸ್ಟ್ರೇಲಿಯನ್ನರೂ ವಿಂಡೀಸ್‌ನ ದೈತ್ಯ ವೇಗಿಗಳನ್ನು ಎದುರಿಸಲು ತಡಕಾಡಿದ್ದರು. ಆದರೆ, ಬಾಂಗ್ಲಾದ ಲೀಟನ್ ದಾಸ್ ತರಹದ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ಅನುಭವದ ಕೈಗಳಿಂದ ಹೊಮ್ಮಿದ ಚೆಂಡನ್ನು ಫುಟ್‌ಬಾಲ್‌ನಂತೆ ನೋಡಿದರು. ಶಾನನ್ ಗೇಬ್ರಿಯಲ್ ತರಹದ ಆರೂವರೆ ಅಡಿ ಎತ್ತರದ ದಪ್ಪ ಭುಜಗಳ ಬೌಲರ್‌ನ ಕಣ್ಣು ಸಣ್ಣಗಾಗುವಂತೆ ಹ್ಯಾಟ್ರಿಕ್ ಸಿಕ್ಸರ್‌ಗಳನ್ನು ಹೊಡೆದರು.

ಇನ್ನೊಂದೆಡೆ ಇಂಗ್ಲೆಂಡ್‌ನ ಬ್ಯಾಟಿಂಗ್ ಶೂರರು ತವರಿನ ಮಣ್ಣ ಮಹಿಮೆ ತಮಗೆ ಗೊತ್ತೆನ್ನುವಂತೆ ಬೀಗುತ್ತಿದ್ದಾರೆ. ಬೆನ್ನುನೋವಿಗೆ ಚಿಕಿತ್ಸೆ ಪಡೆದುಕೊಂಡು ಅಫ್ಘಾನಿಸ್ತಾನದ ಎದುರು ಆಡಲು ಇಳಿದ ನಾಯಕ ಇಯಾನ್ ಮಾರ್ಗನ್ ಹದಿನೇಳು ಸಿಕ್ಸರ್‌ಗಳನ್ನು ಎತ್ತಿ ಮುಖ ಕೆಂಪಗೆ ಮಾಡಿಕೊಂಡರಲ್ಲ. ಅವರು ನಿರ್ದಯಿಯಾಗಿ ದಂಡಿಸಿದ ಅಫ್ಘನ್ ಸ್ಪಿನ್ನರ್ ರಶೀದ್ ಖಾನ್ ಕಳೆದ ನಾಲ್ಕು ವರ್ಷಗಳಲ್ಲಿ ಅತಿ ಸ್ಥಿರ ಪ್ರದರ್ಶನ ನೀಡಿರುವ ಬೌಲರ್. ಅವರ ಗೂಗ್ಲಿಗಳಿಗೆ ವಿಶ್ವಶ್ರೇಷ್ಠರೂ ಮರ್ಯಾದೆ ಕೊಡುತ್ತಾರೆ. ಜಿಂಬಾಬ್ವೆ ಹಾಗೂ ಐರ್ಲೆಂಡ್ ವಿರುದ್ಧವೇ ಹೆಚ್ಚು ಪಂದ್ಯಗಳನ್ನು ಅವರು ಆಡಿದ್ದರಾದರೂ, ಸಾಧನೆಗೆ ತರತಮವೇ? ಆದರೆ, ಮಾರ್ಗನ್ ಸಿಕ್ಸರ್‌ಗಳು ಅವರ ತಲೆಯೊಳಗೆ ಒಂದಿಷ್ಟು ಪ್ರಶ್ನೆಗಳನ್ನು ಇಳಿಸಿರಲಿಕ್ಕೆ ಸಾಕು. ಯುವರಾಜ್ ಸಿಂಗ್ ಹಿಂದೆ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಹಾಕಿದ ಒಂದು ಓವರ್‌ನ ಅಷ್ಟೂ ಎಸೆತಗಳಲ್ಲಿ ಸಿಕ್ಸರ್‌ಗಳನ್ನು ಹೊಡೆದದ್ದು ನೆನಪಿದೆಯಲ್ಲ. ಆಮೇಲೆ ಬ್ರಾಡ್ ಮಾಗಿದ ಬೌಲರ್ ಆಗತೊಡಗಿದರು. ಬಹುಶಃ ರಶೀದ್ ಖಾನ್ ಕೂಡ ತಾವು ತಂತ್ರದಲ್ಲಿ ಎಲ್ಲಿ ಪಳಗಬೇಕು ಎನ್ನಲು ಮಾರ್ಗನ್ ಸಿಕ್ಸರ್‌ಗಳೇ ಪಾಠ ಮಾಡಿಯಾವು.



ಬಾಂಗ್ಲಾ ಕ್ರಿಕೆಟ್ ಅಭಿಮಾನಿಗಳ ಡಾರ್ಲಿಂಗ್ ಶಕೀಬ್ ಅಲ್ ಹಸನ್



ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್

ಈ ಸಲ ವಿಶ್ವಕಪ್‌ನಲ್ಲಿ ವಿಲಿಯಮ್ಸನ್ ಜೂನ್ 26ರ ಹೊತ್ತಿಗೆ 138ರ ಸರಾಸರಿಯಲ್ಲಿ ರನ್ ಗಳಿಸಿ ಗಡ್ಡ ನೀವಿಕೊಳ್ಳುತ್ತಿದ್ದಾರೆ. ಆ ಅವಧಿಯ ಆರು ಪಂದ್ಯಗಳಲ್ಲಿ ಅವರು ಹೊಡೆದಿರುವುದು ಎರಡೇ ಸಿಕ್ಸರ್‌ಗಳನ್ನು. 37 ಬೌಂಡರಿಗಳು ಅವರ ಕ್ಲಾಸ್‌ಗೆ ಸಾಕ್ಷಿ. ಸರಾಸರಿಯಲ್ಲಿ ಇದೇ ಹೊತ್ತಿಗೆ ಅವರಿಗಿಂತ ನಂತರದ ಸ್ಥಾನದಲ್ಲಿರುವ (106.66 ಸರಾಸರಿ) ರೋಹಿತ್ ಶರ್ಮ ನಾಲ್ಕು ಪಂದ್ಯಗಳಲ್ಲಿ ಒಟ್ಟು 320 ರನ್‌ಗಳನ್ನು ಪೇರಿಸಿದ್ದಾರೆ (ಅಫ್ಘಾನಿಸ್ತಾನದ ವಿರುದ್ಧದ ಪಂದ್ಯದವರೆಗೆ). ಅವರ ಇನಿಂಗ್ಸ್‌ನಲ್ಲಿ 6 ಸಿಕ್ಸರ್, 30 ಬೌಂಡರಿಗಳು ಬೆರೆತಿವೆ. ಸರಾಸರಿ ಪಟ್ಟಿಯಲ್ಲಿ ನಂತರದ ಸ್ಥಾನ ಶಕೀಬ್ ಅಲ್ ಹಸನ್ ಅವರಿಗೆ. 95.20ರ ಸರಾಸರಿಯಲ್ಲಿ ಮಿಂಚುತ್ತಿದ್ದಾರೆ. 48 ಬೌಂಡರಿಗಳು ಅವರ ಬ್ಯಾಟ್‌ನಿಂದ ಹೊಮ್ಮಿವೆ. ಇದೇ ಘಟ್ಟದಲ್ಲಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿರುವವರು, ಆಸ್ಟ್ರೇಲಿಯಾದ ಡೇವಿಡ್ ವಾರ್ನರ್. ಅವರು ಹಾಗೂ ಬಾಂಗ್ಲಾದ ಶಕೀಬ್ ಇಬ್ಬರೂ ಎಡಗೈ ಬ್ಯಾಟ್ಸ್‌ಮನ್‌ಗಳು. ಶಕೀಬ್ ತಣ್ಣಗೆ, ಸಂಯಮದಿಂದ ಇನಿಂಗ್ಸ್ ಕಟ್ಟಿದರೆ, ವಾರ್ನರ್ ಬೇಸ್ ಬಾಲ್ ಹೊಡೆಯುವಂತೆ ಚೆಂಡನ್ನು ಹೊಡೆದಟ್ಟುತ್ತಾರೆ. ವಾರ್ನರ್ 7 ಇನಿಂಗ್ಸ್‌ಗಳಲ್ಲಿ 500 ರನ್ ಕಲೆಹಾಕಿದ್ದರೆ, ಶಕೀಬ್ 6 ಇನಿಂಗ್ಸ್‌ಗಳಲ್ಲಿ 476 ರನ್ ಜಮೆ ಮಾಡಿದ್ದಾರೆ. ವಾರ್ನರ್ ಖಾತೆಯಲ್ಲಿ 6 ಸಿಕ್ಸರ್‌ಗಳಿದ್ದರೆ, ಶಕೀಬ್ ಬರೀ 2 ಸಿಕ್ಸರ್ ಮಾತ್ರ ಹೊಡೆದಿದ್ದಾರೆ. ಹೆಚ್ಚು ರನ್ ಗಳಿಕೆಯ ಯಾದಿಯಲ್ಲಿ ಕ್ರಮವಾಗಿ ಎರಡು, ನಾಲ್ಕು, ಐದನೇ ಸ್ಥಾನದಲ್ಲಿರುವ ಆ್ಯರನ್ ಫಿಂಚ್, ಜೋ ರೂಟ್, ವಿಲಿಯಮ್ಸನ್ ಎಲ್ಲರೂ ಕ್ಲಾಸಿಕ್ ಆಟಕ್ಕೆ ಉದಾಹರಣೆಗಳನ್ನು ಕೊಟ್ಟವರು.

ಇದರರ್ಥವಿಷ್ಟೆ. ಚುಟುಕು ಕ್ರಿಕೆಟ್‌ನಲ್ಲಿ ಎದ್ದುಕಂಡ ಮಿಂಚುಹುಳುಗಳೆಲ್ಲ ವಿಶ್ವಕಪ್‌ನಲ್ಲಿ ಕೋರೈಸುತ್ತಿಲ್ಲ. ವಾರ್ನರ್ ಅದಕ್ಕೆ ಅಪವಾದ. ಏಕದಿನ ಪಂದ್ಯಗಳಲ್ಲಿ ಬ್ಯಾಟಿಂಗ್ ಸಂಯಮ ಹಾಗೂ ಆಕ್ರಮಣವನ್ನು ಬೆರೆಸಿದಂತೆ ಇದ್ದರೆ ಸತ್ಫಲ ಎನ್ನುವುದಕ್ಕೆ ಇವರೆಲ್ಲರ ಅಂಕಿಅಂಶಗಳೇ ಪುಷ್ಟಿ ಕೊಡುತ್ತವೆ.

ಬೌಲರ್‌ಗಳು ಇಂಗ್ಲೆಂಡ್‌ನ ಚೆಂಡು ಪುಟಿದೇಳುವ ನೆಲದಲ್ಲಿ ಶಾರ್ಟ್ ಪಿಚ್ ಹಾಕಿದರೆ ಉತ್ತಮ ಫಲ ಸಿಕ್ಕೀತು ಎಂದು ಭಾವಿಸಿದ್ದರು. ಆದರೆ, ವಾರ್ನರ್, ಶಕೀಬ್, ಲೀಟನ್ ದಾಸ್, ರೋಹಿತ್ ಶರ್ಮ, ಮುಷ್ಫಿಕರ್ ರಹೀಮ್, ಜೋ ರೂಟ್ ಮಾಡಿರುವ ಪುಲ್‌ಗಳು ಹಾಗೂ ಹುಕ್‌ಗಳು ಆ ತಂತ್ರ ಯಾವಾಗಲೂ ಫಲ ನೀಡದೆನ್ನುವುದನ್ನು ಸಾಬೀತುಪಡಿಸಿವೆ. ಪಾಕಿಸ್ತಾನದ ಲೆಗ್ ಸ್ಪಿನ್ ಮಾಂತ್ರಿಕ ಶಾದಾಬ್ ಹೇಗೆ ಭಾರತದ ವಿರುದ್ಧ ನಿರುತ್ತರರಾದರು ನೋಡಿ. ಹಾಗಿದ್ದರೆ, ಬೌನ್ಸರ್ ಫಲ ಕೊಟ್ಟೀತೇ? ಕುಳ್ಳಗಿನ ವಾರ್ನರ್ ತಲೆ ಮೇಲೆ ಬರುವ ಎಸೆತಗಳನ್ನು ಹಿಂದಕ್ಕೆ ಕಳಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವುದರಿಂದ ಅದನ್ನೂ ಯೋಚಿಸಬೇಕು. ಗುಡ್ ಲೆಂಗ್ತ್ ಸುರಕ್ಷಿತವಾ? ವಿಂಡೀಸ್ ನಾಯಕ ಜೇಸನ್ ಹೋಲ್ಡರ್ ತಮ್ಮ ಆರು ಅಡಿ ಏಳು ಇಂಚಿನ ದೇಹವನ್ನು ಮುಂದೆ ಮಾಡಿದರೆ, ಅಂಥ ಎಸೆತವೂ ಓವರ್ ಪಿಚ್ ಆಗಿ ಬದಲಾಗಿಬಿಡುತ್ತದೆ.

ಜೂನ್ 26ರವರೆಗೆ ನಡೆದ ವಿಶ್ವಕಪ್ ಪಂದ್ಯಗಳ ಪೈಕಿ ಆರು ಸಲ 600ಕ್ಕೂ ಹೆಚ್ಚು ರನ್‌ಗಳು ಹೊಮ್ಮಿವೆ. ಒಂದು ಸಲ 714 ರನ್ ದಾಖಲಾಗಿವೆ. ಆಸ್ಟ್ರೇಲಿಯಾ ಹಾಗೂ ಬಾಂಗ್ಲಾದೇಶದ ನಡುವಿನ ಪಂದ್ಯ ಅದು. ಇಂಗ್ಲೆಂಡ್ ಹಾಗೂ ಪಾಕಿಸ್ತಾನ, ಆಸ್ಟ್ರೇಲಿಯಾ ಹಾಗೂ ಭಾರತ, ಇಂಗ್ಲೆಂಡ್ ಹಾಗೂ ಬಾಂಗ್ಲಾದೇಶ, ಇಂಗ್ಲೆಂಡ್ ಹಾಗೂ ಅಫ್ಘಾನಿಸ್ತಾನ, ಬಾಂಗ್ಲಾದೇಶ ಹಾಗೂ ವಿಂಡೀಸ್, ಬಾಂಗ್ಲಾದೇಶ ಹಾಗೂ ದಕ್ಷಿಣ ಆಫ್ರಿಕಾ — ಈ ತಂಡಗಳ ನಡುವಿನ ಪಂದ್ಯಗಳಲ್ಲಿ 600ಕ್ಕೂ ಹೆಚ್ಚು ರನ್‌ಗಳು ದಾಖಲಾದದ್ದು. ಇವುಗಳಲ್ಲಿ ಮೂರು ಪಂದ್ಯಗಳಲ್ಲಿ ಬಾಂಗ್ಲಾದ ಕಾಣ್ಕೆ ಕಾಣಿಸುತ್ತಿದೆ. ಇದರರ್ಥ ಬಾಂಗ್ಲಾದೇಶ ಈಗ ಬ್ಯಾಟಿಂಗ್‌ನಲ್ಲಿ ಬಲಾಢ್ಯವಾಗಿದೆ.

ಬೌಲರ್‌ಗಳು ತಮ್ಮ ಅಸ್ತಿತ್ವ ಮೂಡಿಸಲು ಹೆಚ್ಚೇ ಬೆವರು ಹರಿಸುತ್ತಿರುವ ಈ ವಿಶ್ವಕಪ್‌ನಲ್ಲಿ ದಿಗ್ಗಜ ಬ್ಯಾಟ್ಸ್‌ಮನ್‌ಗಳು ಹಬ್ಬ ಮಾಡುತ್ತಿರುವುದಂತೂ ಸ್ಪಷ್ಟ. ಮುಂದೆ ಇನ್ನಷ್ಟು ಇನಿಂಗ್ಸ್‌ಗಳಲ್ಲಿ ಆ ಹಬ್ಬ ಕಳೆಗಟ್ಟಲಿದೆ. ■